# ಪ್ರಾರ್ಥನೆ

## ಭೀಷ್ಮನ ಪ್ರಾರ್ಥನೆ

(ಭಾಗವತದಿಂದ)

ವ್ಯವಹಿತಪೃತನಾಮುಖಂ ನಿರೀಕ್ಷ್ಯ
ಸ್ವಜನವಧಾದ್ವಿಮುಖಸ್ಯ ದೋಷಬುದ್ಧ್ಯಾ ।
ಕುಮತಿಮಹರದಾತ್ಮವಿದ್ಯಯಾ ಯ-
ಶ್ಚರಣರತಿಃ ಪರಮಸ್ಯ ತಸ್ಯ ಮೇಽಸ್ತು ॥

ಯುದ್ಧವು ಪ್ರಾರಂಭವಾಗುವುದಕ್ಕೆ ಮೊದಲು ಸ್ವಲ್ಪದೂರದಲ್ಲಿ ನಿಂತಿದ್ದ ಶತ್ರುಸೇನೆಯನ್ನು ಕಂಡೊಡನೆಯೇ, "ಇವರನ್ನು ಕೊಂದರೆ ಮಹಾಪಾತಕವಾಗುವುದು" ಎಂದು ಭಾವಿಸಿ ಅರ್ಜುನನು ಸ್ವಜನರ ವಧೆಯಿಂದ ವಿಮುಖನಾಗಿ ಕುಳಿತುಬಿಟ್ಟನು. ಆಗ ಯಾವ ಜ್ಞಾನಮೂರ್ತಿಯು ಭಗವದ್ಗೀತೆಯೆಂಬ ಆತ್ಮವಿದ್ಯೆಯನ್ನು ಉಪದೇಶಿಸಿ ಅವನ ಮೋಹವನ್ನು ಕಳೆದನೋ ಅಂತಹ ಪರಮಪುರುಷನ ಪಾದಾರವಿಂದಗಳಲ್ಲಿ ನನ್ನ ಇಂದ್ರಿಯಗಳು ಸಂತೋಷವನ್ನು ಹೊಂದಲಿ.

ವಿಜಯರಥಕುಟುಂಬ ಆತ್ತತೋತ್ರೇ-
ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ ।
ಭಗವತಿ ರತಿರಸ್ತು ಮೇ ಮುಮೂರ್ಷೋ-
ರ್ಯಮಿಹ ನಿರೀಕ್ಷ್ಯ ಹತಾ ಗತಾಃ ಸರೂಪಮ್॥

ಅರ್ಜುನನ ರಥದ ಸಾರಥಿಯಾಗಿ ಒಂದು ಕೈಯಲ್ಲಿ ಚಾವಟಿಯನ್ನೂ, ಮತ್ತೊಂದು ಕೈಯಲ್ಲಿ ಕುದುರೆಯ ಕಡಿವಾಣವನ್ನೂ ಹಿಡಿದುಕೊಂಡು, ಆ ವೇಷದಲ್ಲಿಯೂ ಅತ್ಯಂತ ರಮಣೀಯ ದರ್ಶನನಾಗಿದ್ದ ಯಾವ ಪ್ರಭುವನ್ನು ನೋಡುತ್ತ, ಯುದ್ಧದಲ್ಲಿ ಮಡಿದವರೆಲ್ಲರೂ ಆತನ ಸಾರೂಪ್ಯಮುಕ್ತಿಯನ್ನೇ ಪಡೆದರೋ– ಅಂತಹ ರಮಣೀಯತಮನಾದ ಯೋಗಮೂರ್ತಿಯಲ್ಲಿಯೇ, ಮರಣವನ್ನು ಅಪ್ಪಲು ಬಯಸುತ್ತಿರುವ ನನಗೆ ರತಿಯುಂಟಾಗಲಿ.

ಮುನಿಗಣನೃಪವರ್ಯಸಂಕುಲೇಽಂತಃ-
ಸದಸಿ ಯುಧಿಷ್ಠಿರರಾಜಸೂಯ ಏಷಾಮ್ ।
ಅರ್ಹಣಮುಪಪೇದ ಈಕ್ಷಣೀಯೋ
ಮಮ ದೃಶಿಗೋಚರ ಏಷ ಆವಿರಾತ್ಮಾ ॥

ಮಹಾಮುನಿಗಳೂ ರಾಜಶ್ರೇಷ್ಠರೂ ನೆರೆದಿದ್ದ ಧರ್ಮರಾಜನ ರಾಜಸೂಯ ಯಜ್ಞದ ಸಭೆಯಲ್ಲಿ ಯಾವನಿಗೆ ಮಾಡಿದ ಅಗ್ರಪೂಜೆಯು ನನ್ನ ಕಣ್ಣುಗಳಿಗೆ ನೋಡಲು ಹಬ್ಬವಾಗಿ ತೋರಿತೋ, ಅಂತಹ ಸರ್ವರಿಗೂ ಆತ್ಮಸ್ವರೂಪನಾಗಿರುವ ಪ್ರಭುವೇ ಇಂದು ನನ್ನ ಮೃತ್ಯುಸಮಯದಲ್ಲಿ, ನನ್ನ ಎದುರಿಗೇ ನಿಂತುಕೊಂಡು ದರ್ಶನವನ್ನು ನೀಡುತ್ತಿದ್ದಾನೆ.

# ಸೂಕ್ತಿಪ್ರಭ

## ಅಹಿಂಸೆ

**ಯಾ**ವ ಪ್ರಾಣಿಗೂ ಕಾಯಕವಾಗಿ, ಮಾನಸಿಕವಾಗಿ, ವಾಚಿಕವಾಗಿ ಯಾತನೆ ಕೊಡದಿರುವುದೇ ಅಹಿಂಸೆ. ಅಹಿಂಸೆಗಿಂತ ಮಿಗಿಲಾದ ಧರ್ಮವಿಲ್ಲ. ಯಾರಿಗೂ ನೋವನ್ನು ಕೊಡದಿರುವ ಸ್ಥಿತಿಯಿಂದ ಬರುವ ಸುಖಕ್ಕಿಂತ ಮಿಗಿಲಾದ ಆನಂದ ಈ ಪ್ರಪಂಚದಲ್ಲಿಯೇ ಇಲ್ಲ. *– ಸ್ವಾಮಿ ವಿವೇಕಾನಂದ*

**ಅ**ಹಿಂಸೆಯ ಅಭ್ಯಾಸ, ನಿತ್ಯದ ಆಹಾರಕ್ಕಿಂತ ನಮಗೆ ಹೆಚ್ಚು ಆವಶ್ಯಕವಾದುದು. ಸರಿಯಾಗಿ ತೆಗೆದುಕೊಂಡ ಆಹಾರ ದೇಹವನ್ನು ಪೋಷಿಸುತ್ತದೆ. ಸರಿಯಾಗಿ ಅಭ್ಯಾಸಮಾಡಿದ ಅಹಿಂಸೆ ಆತ್ಮವನ್ನು ಪೋಷಿಸುತ್ತದೆ. *– ಮಹಾತ್ಮ ಗಾಂಧೀ*

**ಪ**ವಿತ್ರಪ್ರವಾದಿಯಾದ ಮುಹಮ್ಮದನು ಈ ಪ್ರಪಂಚಕ್ಕೆ ಬಂದು ನಮಗೆ ಹೀಗೆ ಬೋಧಿಸಿದನು: "ಯಾವನು ತನ್ನ ಮಾತಿನಿಂದಲಾಗಲಿ, ಕೃತಿಯಿಂದಲಾಗಲಿ ಯಾರನ್ನೂ ಗಾಸಿಗೊಳಿಸನೋ, ಯಾವನು ಭಗವಂತನ ಜೀವಿಗಳ ಸುಖ ಮತ್ತು ಅನುಕೂಲಕ್ಕಾಗಿ ಕೆಲಸ ಮಾಡುವನೋ, ಅಂತಹ ವ್ಯಕ್ತಿ ಮಾತ್ರವೇ ಮುಸ್ಲಿಮನು." ಭಗವಂತನಲ್ಲಿ ನಂಬಿಕೆ ಇಡುವುದೆಂದರೆ ನಮ್ಮ ಸಹಮಾನವರನ್ನು ಪ್ರೀತಿಸುವುದೇ ಆಗಿದೆ.

*–ಗಡಿನಾಡ ಗಾಂಧಿ ಅಬ್ದುಲ್ ಗಫಾರ್ ಖಾನ್*

**ನೀ**ವು ಪ್ರೀತಿಯನ್ನು ಅಹಿಂಸೆಯಿಂದ ಬೇರ್ಪಡಿಸಿದರೆ, ಅದನ್ನು ಬರೀ ಸಿದ್ಧಾಂತವನ್ನಾಗಿ, ಬೂಟಾಟಿಕೆಯನ್ನಾಗಿ ಪರಿವರ್ತಿಸುತ್ತೀರಿ. ನ್ಯಾಯ ಮತ್ತು ಪ್ರೀತಿಗಳು ನೆಲೆಸದ ರಚನೆಗಳು ಸ್ವತಂತ್ರಗೊಳಿಸುವ ಅಥವಾ ಸಮನ್ವಯಗೊಳಿಸುವ ಶಕ್ತಿಯಾಗಿ ಉಳಿಯುವುದಿಲ್ಲ; ಪ್ರೀತಿಯು ಸಫಲವಾಗಲು ತಾಳ್ಮೆ ಬೇಕು. *–ಜೀನ್ ಗಾಸ್*

**ಅ**ಹಿಂಸೆಯೆಂಬುದು ಬಹಳ ಪರಿಶ್ರಮದಾಯಕವಾದ ಕಾರ್ಯವಾಗಿದೆ. ಅದು ಎಂತಹ ತ್ಯಾಗಕ್ಕಾದರೂ ಸಿದ್ಧವಿರುವುದೇ ಆಗಿದೆ. ಇದು ಜಯಗೊಳಿಸಲು ಬೇಕಾದ ತಾಳ್ಮೆಯಲ್ಲದೆ ಬೇರೆಯಲ್ಲ.

*–ಸೀಸರ್ ಚಾವೆಜ್*

**ನಾ**ವು ಈ ಭೂಮಿಯಲ್ಲಿ ಯುದ್ಧಗಳನ್ನು ತಡೆಯಲು ಶಕ್ತರಾದರೆ, ಹಸಿವೆಯ ವಿರುದ್ಧ ಯುದ್ಧ ಸಾರುವುದನ್ನು ನಮ್ಮ ಮೊದಲ ಆದ್ಯತೆಯನ್ನಾಗಿ ಮಾಡಿಕೊಳ್ಳುತ್ತೇವೆ.

*– ಡೇವಿಡ್ ಡಬ್ಲ್ಯು. ಬ್ರೂಕ್ಸ್*

**ನಾ**ವು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತೇವೆಯೋ, ಅದರಂತೆ ಆಗಕೂಡದು.

*–ಬಿಷಪ್ ಡೆಸ್ಮಂಡ್ ಟುಟು*